MS – 003

# II Semester B.Com. Examination, May 2011
## (Fresher Scheme)
## ಕನ್ನಡ ಭಾಷೆ ಪತ್ರಿಕೆ – 2
## ಸಾಹಿತ್ಯ ಸಮನ್ವಯ – 2 ಮತ್ತು ನಿಗೂಢ ಮನುಷ್ಯರು

Time : 3 Hours　　　　Max. Marks : 90

I. ಇಲ್ಲಿ ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ : **(1×10=10)**

1) 'ವರ್ಧಮಾನ' ಎಂದರೇನು ?
2) 'ಎದೆಯದನಿ' ಈ ಮಾತಿನ ಅಂತರಾರ್ಥವೇನು ?
3) 'ಲಿಂಗಸಂಗಿ' ಎಂದರೇನು ?
4) 'ಅನಿಷ್ಟ ಪದ್ಧತಿ ವಿರುದ್ಧ' – ಈ ಲೇಖನದ ಕರ್ತೃ ಯಾರು ?
5) 'ಬಿಡಿ ಹೂ ಮುಡಿದಂತೆ' – ಈ ಮಾತಿನ ಸಂಕೇತವೇನು ?
6) WTO ಎಲ್ಲಿದೆ ?
7) ಬಂಡಿತಿಂದರೂ ಉಂಡಹಾಗಲ್ಲ.... ಈ ಗಾದೆಯನ್ನು ಪೂರ್ಣಗೊಳಿಸಿ.
8) 'ಜಿಹಾದ್' ಯಾವ ಧರ್ಮದಲ್ಲಿ ಪ್ರಚಲಿತವಾಗಿದೆ ?
9) 'ನುಡಿಗೆಟ್ಟವಳು' ಎಂದು ಯಾರನ್ನು ಕರೆಯಲಾಗಿದೆ ?
10) 'ನಿಗೂಢ ಮನುಷ್ಯರು' – ಈ ಕಾದಂಬರಿಯ ಕೇಂದ್ರ ಪಾತ್ರ ಯಾವುದು ?

II. ಯಾವುದಾದರೂ ಐದನ್ನು ಕುರಿತು ಉತ್ತರಿಸಿ : **(5×2=10)**

1) ಮನುಧರ್ಮಶಾಸ್ತ್ರ
2) ತೀ. ನಂ. ಶ್ರೀ.
3) ನವ್ಯ ಸಾಹಿತ್ಯ.
4) ಇಳೆವೆಣ್ಣು.
5) ಪೂರ್ಣಚಂದ್ರ ತೇಜಸ್ವಿ.
6) ಭಯೋತ್ಪಾದನೆಯ ಮೂರು ಮುಖ್ಯ ಲಕ್ಷಣಗಳು.
7) ಸಾ.ರಾ. ಅಬೂಬಕರ್.
8) ಕಾಂಪ್ರ ಮತ್ತು ಲೋರಿ.

III. ಯಾವುದಾದರೂ ಒಂದು ಪದ್ಯವನ್ನು ವಿಶ್ಲೇಷಿಸಿ : **(1×6=6)**

ಪಂಚಮರ ಶಿಶುವೊಂದು ಕೆರೆಯಲಿ ಮುಳುಗುತಿರೆ
ದಡದಲ್ಲಿ ಮೀಯುತ್ತ ನಿಂತಿರುವ ನಾನು
ಮಟ್ಟಿದರೆ 'ಬ್ರಹ್ಮತ್ವ' ಕೆಟ್ಟು ಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರಸಮ್ಮತವದೇನು ?

ಅಥವಾ

P.T.O.

ವೃತ್ತದಲಿ ಉನ್ನತ್ತರಾದ
ನಿಮ್ಮ ಕುಡಿತ, ಕುಣಿತ, ಕೂಟಗಳು ಕೆಣಕಿ
ಕುಣಿಕೆ ಎಸೆದಿದ್ದರೂ
ಪಂಚೇಂದ್ರಿಯಕ್ಕೆ ಲಗಾಮು ಜಡಿದು ಜಾರದೆ ನಿಮ್ಮತ್ತ
ಸಂಯಮವನ್ನೇ ಪೋಷಿಸಿ ಸಾಕುತ್ತಾ
ರೇಖೆಯಲ್ಲೇ ಡೊಂಬರಾಟ ನಡೆಸುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ

IV. ಯಾವುದಾದರೂ ಆರು ಪ್ರಶ್ನೆಗಳಿಗೆ ಉತ್ತರಿಸಿ : **(6×4=24)**

1) 'ಕಾಲಕ್ಕೆ ತಕ್ಕಂತೆ ಬದುಕಬೇಕು' ಎಂಬುದನ್ನು ಕುವೆಂಪು ಹೇಗೆ ಪ್ರಸ್ತಾಪಿಸಿದ್ದಾರೆ ? ಚರ್ಚಿಸಿ.
2) ಚಿಗುರು ಮೀಸೆಯ ಯುವಕನ ಒಗರು–ಪೊಗರು ಹೇಗಿರುತ್ತದೆ ? ವಿವರಿಸಿ.
3) ಸೂರ್ಯೋದಯದ ಸೊಬಗು ಕಣವಿಯವರ ಭಾವಭಿತ್ತಿಯಲಿ ಮೂಡಿದ ಪರಿಯನ್ನು ಚಿತ್ರಿಸಿ.
4) T.S. ವೆಂಕಣ್ಣಯ್ಯನವರ ಯಾವ ಗುಣ–ಸ್ವಭಾವಗಳು ತೀ. ನಂ. ಶ್ರೀ. ಯವರನ್ನು ಆಕರ್ಷಿಸಿದವು ?
5) ಒಸಾಮಬಿನ್ ಲಾಡೆನ್ ಯಾರು ? ಅವನನ್ನು ಆರಂಭದಲ್ಲಿ ಬೆಳೆಸಿದವರು ಯಾರು ?
6) ಶಾರಿ, ಗೋಪಾಲಯ್ಯನವರೊಂದಿಗೇ ಇರಲು ಕಾರಣಗಳೇನು ? ವಿವರಿಸಿ.
7) ಸರಿಯಾದ ಆಹಾರಕ್ರಮ ಕುರಿತಂತೆ ವಿವೇಕಾನಂದರ ಅಭಿಪ್ರಾಯವೇನು ?
8) ಮರಸರ ಮತ್ತು ಕುಳುಪ ಇವರನ್ನು ಪರಿಚಯಿಸಿ.

V. ಇಲ್ಲಿ ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ : **(4×10=40)**

1) ''ಶಾಸ್ತ್ರಕ್ಕಿಂತ ಬದುಕೇ ಮುಖ್ಯ '' – ಈ ಮಾತನ್ನು ಕುವೆಂಪು ಹೇಗೆ ಸಮರ್ಥಿಸಿದ್ದಾರೆ ? ವಿಶ್ಲೇಷಿಸಿ.

ಅಥವಾ

''ಮೊಳೆವ ಕೊಂಬಿಗೆ ತೀರದ ತುರಿಕೆ''– ಈ ಮಾತನ್ನು ಅಡಿಗರು ಹೇಗೆ ಚಿತ್ರಿಸಿದ್ದಾರೆ ? ವಿಮರ್ಶಿಸಿ.

2) ಹೊಟ್ಟೆಯ ಹಸಿವು ಮತ್ತು ಜ್ಞಾನದ ಹಸಿವನ್ನು ಕುರಿತು ಲೇಖಕರ ಚಿಂತನೆಗಳನ್ನು ವಿಶ್ಲೇಷಿಸಿ.

ಅಥವಾ

ಮಸಾಲೆದೋಸೆ ನಾಗರೀಕತೆಯ ಸಂಕೇತವೆ ? ಲೇಖಕರ ಅಭಿಪ್ರಾಯಗಳನ್ನು ವಿಶ್ಲೇಷಿಸಿ.

3) ವರದಕ್ಷಿಣೆ ಸಮಸ್ಯೆ ಪರಿಹಾರಕ್ಕೆ ಲೇಖಕಿ ನೀಡುವ ಸಲಹೆಗಳೇನು ? ವಿಶ್ಲೇಷಿಸಿ.

ಅಥವಾ

ಭಯೋತ್ಪಾದನೆಯ ಕಾರಣಗಳು ಹಾಗೂ ಅದರ ಹಿನ್ನೆಲೆಯನ್ನು ವಿಮರ್ಶಿಸಿ.

4) ಮನಸ್ಸಿನ ನಿಗೂಢತೆ ತೇಜಸ್ವಿಯವರ ನಿಗೂಢ ಮನುಷ್ಯರು ಕಾದಂಬರಿಯಲ್ಲಿ ಹೇಗೆ ವ್ಯಕ್ತವಾಗಿದೆ ? ಯಾವುದಾದರೂ ಎರಡು ಪಾತ್ರಗಳ ಮೂಲಕ ವಿಮರ್ಶಿಸಿ.

ಅಥವಾ

ಉಗ್ರಗಿರಿಯ ತಪ್ಪಲಿನ ಜೀವನದ ಆತಂಕಗಳನ್ನು ವಿಶ್ಲೇಷಿಸಿ.

---

# II Semester B.Com. Examination, May 2011
## (Repeaters Scheme)
## ಕನ್ನಡ ಭಾಷಾ ಪತ್ರಿಕೆ – 2
## ಸಾಹಿತ್ಯ ಸಂವಾದ – 1

Time : 3 Hours　　　　Max. Marks : 90

I. 1) ಅರ್ಥ ಬರೆಯಿರಿ : **(4×1=4)**

ಒಡಲು, ದಾನವ, ವಸುಧೆ, ಕೊಳು.

2) ನಾನಾರ್ಥಗಳನ್ನು ಬರೆಯಿರಿ : **(4×1=4)**

ಬಟ್ಟೆ, ಹೊಳೆ, ಸಾಕು, ಪಕ್ಷ

3) ಮೂಲ ರೂಪ ಬರೆಯಿರಿ : **(4×1=4)**

ಬನ, ಮಿಲ್ಲು, ಬೊಮ್ಮ, ಸಕ್ಕದ.

4) ಈ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಬಳಸಿ : **(4×1=4)**

ಜೋಳದ ಪಾಳಿ, ಕಚ್ಚಾಟ, ಎಳ್ಳು ನೀರು, ತಲೆದೂಗು.

5) ನಾಲ್ಕು ಜೋಡಿಪದಗಳನ್ನು ಬರೆಯಿರಿ. **(4×1=4)**

6) ನಾಲ್ಕು ಅನುಕರಣ ವಾಚಕಗಳನ್ನು ಬರೆಯಿರಿ. **(4×1=4)**

7) ಈ ಗಾದೆ ಮಾತುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ : **(2×3=6)**

ಅ) ನೀರಿಳಿಯದ ಗಂಟಲಲ್ಲಿ ಕಡಬನ್ನು ತುರುಕಿದಂತೆ.

ಆ) ಉಪ್ಪು ತಿಂದವನು, ನೀರು ಕುಡಿಯಲೇ ಬೇಕು.

II. ನಾಲ್ಕು ಪ್ರಶ್ನೆಗಳಿಗೆ ತಾರ್ಕಿಕ ಉತ್ತರ ಬರೆಯಿರಿ : **(4×5=20)**

1) 'ಶ್ರಾವಣ' ಪದ್ಯದಲ್ಲಿ ಮನುಷ್ಯ ಮತ್ತು ನಿಸರ್ಗದ ಸಂಬಂಧ ಯಾವ ಬಗೆಯದು ?

2) ಬನವಾಸಿಯಲ್ಲಿ ಏನಾಗಿ ಹುಟ್ಟಬೇಕೆಂದು ಪಂಪ ಬಯಸುತ್ತಾನೆ ? ಅವನ ಆಶಯವನ್ನು ಸ್ಪಷ್ಟಪಡಿಸಿ.

3) 'ಮುಂಬೈ ಜಾತಕ' ಕವನದಲ್ಲಿ ನಗರ ಜೀವನದ ಬಗೆಗೆ ಕವಿಯು ತಳೆದ ನಿಲುವೇನು ?

4) ಸಂಸ್ಕೃತದ ಸೊಗಸಿನ ಬಗ್ಗೆ ಮುದ್ದಣ–ಮನೋರಮೆಯರು ಕಂಡ ಬಗೆಯೆಂತು ?

5) ಕಸಿನ್ಸ್‌ರ ಬಗ್ಗೆ ಕುವೆಂಪುರವರಿಗೆ ಇದ್ದ ಧೋರಣೆಗಳೇನು ?

6) ರೇಖೆಗಳ ವೈಖರಿ ನಮಗೆ ಯಾವ ತಿಳಿವಳಿಕೆಯನ್ನು ನೀಡುತ್ತದೆ ?

III. ನಾಲ್ಕು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : **(4×5=20)**

1) ದೇಶಭಾಷೆಯಲ್ಲಿ ಸಾಹಿತ್ಯ ಸೃಷ್ಟಿ ಅಸಾಧ್ಯ ಎನ್ನುವುದಕ್ಕೆ ಕುವೆಂಪು ಕೊಡುವ ಕಾರಣಗಳೇನು ?

2) ಮಂಗಮ್ಮ ಮಗ–ಸೊಸೆಯರಿಂದ ದೂರ ಉಳಿಯಲು ನಿರ್ಧರಿಸಿದ ಸಂದರ್ಭದ ಹಿನ್ನೆಲೆಯೇನು ?

3) ಜನಪದರು ಭೂಮಿ–ಕುಟುಂಬ–ಕೆಲಸ ಮೊದಲಾದವುಗಳೊಂದಿಗೆ ಹೊಂದಿರುವ ಸಂಬಂಧದ ಸ್ವರೂಪವನ್ನು ತಿಳಿಸಿ.

4) ಯಂತ್ರನಾಗರೀಕತೆ ಮನುಷ್ಯ ಮತ್ತು ನಿಸರ್ಗದ ನಡುವಿನ ಸಂಬಂಧವನ್ನು ಭಗ್ನಗೊಳಿಸಿದ ಬಗೆ 'ಮಿಲ್ಲು ಮತ್ತು ಹಕ್ಕಿ' ಕತೆಯಲ್ಲಿ ಹೇಗೆ ವ್ಯಕ್ತಗೊಂಡಿದೆ ?

5) ವಾಲ್ಮೀಕಿ ಬರೆದ ಕತೆಯ ಹಿನ್ನೆಲೆಯನ್ನು ವಿವರಿಸಿ.

6) 'ಯಾರು ನೀ ಕವಿತೆ'ಯ ವಸ್ತು ವೈವಿಧ್ಯವನ್ನು ತಿಳಿಸಿ.

IV. ಎರಡು ಪ್ರಶ್ನೆಗಳಿಗೆ ಅನುಭವದ ಹಿನ್ನೆಲೆಯಲ್ಲಿ ಉತ್ತರಿಸಿ : **(2×10=20)**

1) ನಿಸರ್ಗದೊಂದಿಗೆ ಮಾನವ ಸಂಬಂಧ ಹೇಗಿರಬೇಕೆಂಬುದನ್ನು ಪಠ್ಯಗಳ ಹಿನ್ನೆಲೆಯಲ್ಲಿ ಚರ್ಚಿಸಿ.

2) ಬದುಕಿನ ಭಾವ–ಸಂಬಂಧಗಳು ಜಾನಪದ ತ್ರಿಪದಿಯಲ್ಲಿ ಹೇಗೆ ವ್ಯಕ್ತಗೊಂಡಿದೆ ?

3) ಮಾನವ ನಿರ್ಮಿತ ಸಮಸ್ಯೆಗಳಾವುವು ? ಅವುಗಳಿಗೆ ಯಾವ ಬಗೆಯ ಪರಿಹಾರವನ್ನು ನೀವು ಸೂಚಿಸ ಬಯಸುತ್ತೀರಿ ?

4) ಭಾಷೆಗಳ ಕಣ್ಮರೆ ಎಂದರೇನು ? ಜೀವ ವೈವಿಧ್ಯ ಹಾಗೂ ಭಾಷಾ ವೈವಿಧ್ಯಗಳನ್ನು ಏಕೆ ಕಾಯ್ದುಕೊಳ್ಳಬೇಕು ? ವಿಚಾರ ಮಾಡಿ.

---